**ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು**
**ಸ್ಥಾಯಿ ಸಮಿತಿ ಸದಸ್ಯರ ಸಭೆಯ ನಡಾವಳಿ.**

ದಿನಾಂಕ 5/02/2020 ರಂದು ಬೆಂಗಳೂರಿನ ಕನ್ನಡಭವನದ ಅಂತರಂಗದಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯ ಸ್ಥಾಯಿಸಮಿತಿ ಸದಸ್ಯರ ಸಭೆಯ ನಡಾವಳಿ.

**ಉಪಸ್ಥಿತರು : ಸರ್ವಶ್ರೀ / ಶ್ರೀಮತಿ**

| | | |
|---|---|---|
| 1. | ಪ್ರೊ: ಭೀಮಸೇನ.ಆರ್. | ಅಧ್ಯಕ್ಷರು |
| 2. | ಎಂ.ಎಸ್.ಗುಣಶೀಲನ್ | ಸದಸ್ಯರು |
| 3. | ಕೆ.ಆರ್.ಪ್ರಕಾಶ್ | ಸದಸ್ಯರು |
| 4. | ಹೆಚ್.ಎಂ.ನಾಗರಾಜರಾವ್ | ಸದಸ್ಯರು |
| 5. | ಯಶವಂತ ಸರದೇಶಪಾಂಡೆ | ಸದಸ್ಯರು |
| 6. | ಡಾ.ಶೈಲಜಾ ಎ.ಸಿ | ರಿಜಿಸ್ಟಾರ್,ಕ.ನಾ.ಅ |

**ಅನುಪಸ್ಥಿತರು :**

| | | |
|---|---|---|
| 1. | ಶ್ರೀ ಕಲ್ಲೇಶ್ | ಅರ್ಥ ಸದಸ್ಯರು |

----

ಹಾಜರಿದ್ದ, ಎಲ್ಲಾ ಸದಸ್ಯರನ್ನು ಅಕಾಡೆಮಿ ರಿಜಿಸ್ಟ್ರಾರ್, ಡಾ.ಶೈಲಜಾ ಎ.ಸಿ. ಅವರು ಸ್ವಾಗತಿಸಿ, ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಪ್ರೊ.ಭೀಮಸೇನ್.ಆರ್ ಅವರು ವಹಿಸಿಕೊಂಡು ಮುಂದಿನ ಕಾರ್ಯಗಳನ್ನು ನಿರ್ವಹಿಸಬೇಕೆಂದು ಕೋರಿದರು.

**ಹೈದ್ರಾಬಾದ್ ನಾಟಕೋತ್ಸವ**

ನಾಟಕ ಅಕಾಡೆಮಿ ಮತ್ತು ಕರ್ನಾಟಕ ಸಾಹಿತ್ಯ ಮಂದಿರ, ಕಾಚೀಗೂಡ ಸಂಸ್ಥೆಯ ಸಹಯೋಗದಲ್ಲಿ ಹೈದ್ರಾಬಾದ್‌ನಲ್ಲಿ ದಿನಾಂಕ 8, 9 ಮತ್ತು 10 ರಂದು ನಡೆಯುವ ಮೂರು ದಿನದ ನಾಟಕೋತ್ಸವದ ಬಗ್ಗೆ ಅದರ ಸಂಚಾಲಕರಾದ ಶ್ರೀ ಎಂ.ಎಸ್.ಗುಣಶೀಲನ್ ಅವರು ಈವರೆವಿಗೂ ಆಗಿರುವ ಕಾರ್ಯಕ್ರಮದ ವ್ಯವಸ್ಥೆ ಬಗ್ಗೆ ವಿವರ ನೀಡಿದರು ಹಾಗೂ ದಿನಾಂಕ 7-2-2020ರಂದು ಪತ್ರಿಕಾಗೋಷ್ಠಿಯನ್ನು ಏರ್ಪಡಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ನಾಟಕ ಪ್ರದರ್ಶನ ನೀಡುವ ಮೂರು ತಂಡಗಳಿಗೂ ಸಂಭಾವನೆ ತಲಾ ರೂ.50,000/-ದ ಜೊತೆ ಸ್ಥಳೀಯ ಸಾರಿಗೆ ವ್ಯವಸ್ಥೆಗಾಗಿ ರೂ.7,000/-ಗಳನ್ನು ಸೇರಿಸಿ, ಮೂರು ತಂಡಗಳಿಗೆ ತಲಾ ರೂ.57,000/-ಗಳನ್ನು ನೀಡಲು ಸಭೆ ಅನುಮೋದನೆ ನೀಡಿತು.

ಈ ಸಂದರ್ಭದಲ್ಲಿ ಅಕಾಡೆಮಿಯ ನಾಟಕೋತ್ಸವ, ಕಾರ್ಯಾಗಾರ ಮುಂತಾದವುಗಳ ಸಂಬಂಧ ಸದಸ್ಯ ಸಂಚಾಲಕರಿಗೆ ಭತ್ಯೆಯಾಗಿ ರೂ.10,000/-ಗಳನ್ನು ಪಾವತಿಸುತ್ತಿದ್ದು, ಕಾರ್ಯಕ್ರಮದ ಸಂಬಂಧ ಸಂಚಾಲಕರು ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆ ಮತ್ತು ಕಾರ್ಯಕ್ರಮದ ವ್ಯವಸ್ಥೆಗಾಗಿ ನಿಗದಿತ ಸ್ಥಳಕ್ಕೆ ಮೂರು, ನಾಲ್ಕು ಬಾರಿ ಓಡಾಟ ಮಾಡಬೇಕಿದ್ದು, ಅಲ್ಲಿನ ಊಟ, ತಿಂಡಿ ಮತ್ತು ವಸತಿಯ ಮೊತ್ತ, ಹೆಚ್ಚಾಗುತ್ತಿದ್ದು, ರೂ.10,000/-ದ ಜೊತೆ ಹೆಚ್ಚಿನ ಮೊತ್ತವನ್ನು ನೀಡಬೇಕೆಂಬ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಅಂತಿಮವಾಗಿ ಸದಸ್ಯ ಸಂಚಾಲಕರ ಭತ್ಯೆ ರೂ.10,000/- ಮತ್ತು ಹೆಚ್ಚುವರಿ ಖರ್ಚುಗಳು ಬಂದಲ್ಲಿ, ನಿಯಮಾನುಸಾರ ಸದಸ್ಯರಿಂದ ಬಿಲ್ಲುಗಳನ್ನು ಪಡೆದು ಸದಸ್ಯ ಸಂಚಾಲಕರಿಗೆ ಪಾವತಿಸಲು ಸಭೆ ತೀರ್ಮಾನಿಸಿತು.

ಕಾರ್ಯಕ್ರಮಗಳ ಆಹ್ವಾನಪತ್ರಿಕೆ, ಬ್ಯಾನರ್, ಪ್ರಮಾಣಪತ್ರಗಳನ್ನು ಅಕಾಡೆಮಿಯಿಂದ ಸಿದ್ಧಪಡಿಸಿ ಕಳುಹಿಸುತ್ತಿದ್ದು, ಅದರ ಬದಲಾಗಿ ಆಯಾ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿಯೇ ಆಹ್ವಾನಪತ್ರಿಕೆ, ಬ್ಯಾನರ್‌ಗಳನ್ನು ಸದಸ್ಯ ಸಂಚಾಲಕರು ಸಿದ್ಧಪಡಿಸಿ, ದರಪಟ್ಟಿ, ಬಿಲ್ಲುಗಳನ್ನು ಸದಸ್ಯರು ಪಡೆದು ಸಲ್ಲಿಸಲು

ಅವಕಾಶ ನೀಡಬೇಕೆಂದು ತಿಳಿಸಿದರು. ಈ ವಿಷಯದ ಬಗ್ಗೆ ರಿಜಿಸ್ಟ್ರಾರ್ ಅವರು ರಾಜ್ಯದ ಬೇರೆ ಬೇರೆ ಸ್ಥಳದಲ್ಲಿನ ದರಪಟ್ಟಿಗಳನ ದರಗಳು ವ್ಯತ್ಯಾಸವಾಗುವುದಾಗಿ, ಇದು ಆಡಿಟ್‌ನಲ್ಲಿ ಆಕ್ಷೇಪಣೆಯಾಗುತ್ತದೆ ಮತ್ತು ಸರ್ಕಾರಿ ಸುತ್ತೋಲೆ ಪ್ರಕಾರ ಮತ್ತು ಬೈಲಾ ಪ್ರಕಾರ ಕಾರ್ಯಕ್ರಮ ಅನುಷ್ಠಾನಗೊಳಿಸುವುದು ಮತ್ತು ವ್ಯವಸ್ಥೆ ಮಾಡುವುದು ರಿಜಿಸ್ಟ್ರಾರ್ ಅವರ ಕರ್ತವ್ಯವಾಗಿರುತ್ತದೆ ಹಾಗಾಗಿ ಸದಸ್ಯರು ಆಹ್ವಾನಪತ್ರಿಕೆ, ಬ್ಯಾನರ್ ಮಾಡಿಸಲು ಅವಕಾಶವಿರುವುದಿಲ್ಲ ಎಂದು ತಿಳಿಸಿದರು. ಸದಸ್ಯರಾದ ಶ್ರೀ ಹೆಚ್.ಎಂ.ನಾಗರಾಜ್ ರಾವ್ ಕಲ್ಕಟ್ಟೆ ಅವರು ಕೇಂದ್ರ ಸ್ಥಾನದಿಂದಲೇ ಎಲ್ಲಾ ಅಕಾಡೆಮಿಗಳ ರಿಜಿಸ್ಟ್ರಾರ್‌ಗಳು ಕಾರ್ಯಕ್ರಮದ ಆಹ್ವಾನಪತ್ರಿಕೆ ಮಾಡಿಸುತ್ತಿರುವುದನ್ನು ತಿಳಿಸಿದರು. ಇದಕ್ಕೆ ಒಪ್ಪದ ಸಭೆಯು, ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿತು. ಅಂತಿಮವಾಗಿ ಈ ವಿಷಯವಾಗಿ ನಿರ್ದೇಶಕರ ಸಲಹೆಯನ್ನು ಪಡೆಯಲು ಸದಸ್ಯರು ನಿರ್ಧರಿಸಿದರು.

**ವೃತ್ತಿರಂಗಭೂಮಿ ನಾಟಕೋತ್ಸವ**

ನಾಟಕ ಅಕಾಡೆಮಿ ಮತ್ತು ಶ್ರೀ ಭಾರತಿ ತೀರ್ಥ ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನ ಕೇಂದ್ರ ಟ್ರಸ್ಟ್(ರಿ) ಶೃಂಗೇರಿ ಅವರ ಸಹಯೋಗದಲ್ಲಿ ಮೂರು ದಿನಗಳ ವೃತ್ತಿರಂಗಭೂಮಿ ನಾಟಕೋತ್ಸವವನ್ನು ಶೃಂಗೇರಿಯ ಪದ್ಮಶ್ರೀ ಡಾ.ವಿ.ಆರ್.ಗೌರಿಶಂಕರ ಸಭಾಂಗಣದಲ್ಲಿ ದಿನಾಂಕ 15-2-2020 ರಿಂದ ದಿನಾಂಕ 17-2-2020ರವರೆಗೆ ಆಯೋಜಿಸಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರಾದ ಸನ್ಮಾನ್ಯ ಶ್ರೀ ಸಿ.ಟಿ.ರವಿ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡುವ ವಿಷಯವನ್ನು ಸದಸ್ಯ ಸಂಚಾಲಕರಾದ ಶ್ರೀ ನಾಗರಾಜರಾವ್ ಕಲ್ಕಟ್ಟೆ ಅವರು ಸಭೆಯ ಗಮನಕ್ಕೆ ತಂದರು.

ನಾಟಕೋತ್ಸವಕ್ಕೆ ನಿಗದಿಪಡಿಸಿರುವ **ಮೊತ್ತ ರೂ.5ಲಕ್ಷ**

**ನಾಟಕಗಳ ವಿವರ**

| ಕ್ರ.ಸಂ | ದಿನಾಂಕ | ತಂಡದ ಹೆಸರು | ನಾಟಕದ ಹೆಸರು | ರಚನೆ |
|---|---|---|---|---|
| 1 | 15-2-2020 | ವಿಶ್ವಜ್ಯೋತಿ ನಾಟ್ಯಸಂಘ, ಜೇವರ್ಗಿ | ಕುಂಟ ಕೋಣ ಮೂಕ ಜಾಣ | ರಾಜಣ್ಣ ಜೇವರ್ಗಿ |
| 2 | 16-2-2020 | ರೂಪಕಲಾ ಕುಳ್ಳಪ್ಪು, ಮೂರು ಮುತ್ತು ಕಲಾವಿದರು, ಕುಂದಾಪುರ | ರಂಗಮಂಟಪ | ಸತೀಶ್ ಪೈ |
| 3 | 17-2-2020 | ಶ್ರೀ ಕೆ.ಬಿ.ಆರ್. ಡ್ರಾಮಾಕಂಪನಿ, ದಾವಣಗೆರೆ | ನಿದ್ದಿಗೆಡಿಶ್ಯಾಳ ಬಸಲಿಂಗಿ | ಚಿಂದೋಡಿ ಶ್ರೀಕಂಠೇಶ್ |

ಕಾರ್ಯಕ್ರಮದ ಅಂದಾಜು ವೆಚ್ಚ

| ಕ್ರ.ಸಂ | ಕಾರ್ಯಕ್ರಮದ ವಿವರ | ಅಂದಾಜು ಮೊತ್ತ ರೂ. |
|---|---|---|
| 1 | 3 ನಾಟಕಗಳ ಸಂಭಾವನೆ (ತಲಾ ರೂ.50,000/-ದಂತೆ) | 1,50,000/- |
| 2 | ಲೈಟ್ಸ್, ಸೌಂಡ್ | 30,000/- |
| 3 | ಸೀನರಿ | 35,000/- |
| 4 | ಪೋಟೋ, ವಿಡಿಯೋ | 10,000/- |
| 5 | ರಂಗಮಂದಿರ ಬಾಡಿಗೆ | 40,000/- |
| 6 | ಊಟ, | 40,000/- |
| 7 | ವಸತಿ | 40,000/- |
| 8 | ಪ್ರಚಾರ | 10,000/- |
| 9 | ಆಹ್ವಾನಪತ್ರಿಕೆ, ಪ್ರಮಾಣಪತ್ರ | 30,000/- |
| 10 | ಬ್ಯಾನರ್, ಕರಪತ್ರ | 10,000/- |
| 11 | ಸದಸ್ಯ ಸಂಚಾಲಕರ ಬಾಬ್ತು | 10,000/- |
| 12 | ಸದಸ್ಯರ ಊಟ, ವಸತಿ | 20,000/- |
| 13 | ಸ್ಥಳೀಯ ಸಾರಿಗೆ | 6,000/- |
| 14 | ಇತರೆ | 24,000/- |
| | ಒಟ್ಟು ರೂ. | 4,60,000/- |

ಊಟ, ವಸತಿ, ರಂಗಮಂದಿರ ಬಾಡಿಗೆ, ಫೋಟೋ ಮತ್ತು ವಿಡಿಯೋ ವ್ಯವಸ್ಥೆಯನ್ನು ಮಾಡಲು ಸದಸ್ಯ ಸಂಚಾಲಕರು ಅಕಾಡೆಮಿಯೊಂದಿಗೆ ಸಹಕರಿಸುವಂತೆ ಕೋರಲಾಯಿತು. ಆಹ್ವಾನಪತ್ರಿಕೆ, ಕರಪತ್ರ, ಪ್ರಮಾಣಪತ್ರ, ಬ್ಯಾನರ್‌ಗಳನ್ನು ಅಕಾಡೆಮಿಯಿಂದ ವ್ಯವಸ್ಥೆ ಮಾಡಲಾಗುವುದು. ತಂಡದ ಎಲ್ಲಾ ಕಲಾವಿದರುಗಳಿಗೆ ಮತ್ತು ಅತಿಥಿಗಳಿಗೆ ಅಕಾಡೆಮಿಯ ಪ್ರಕಟಣೆಯ ಪುಸ್ತಕಗಳನ್ನು ಕಾಣಿಕೆಯಾಗಿ ನೀಡಲು ಸಭೆ ಅನುಮೋದಿಸಿತು. ನಾಟಕೋತ್ಸವದ ಎಲ್ಲಾ ವೆಚ್ಚಗಳನ್ನು ನಿಯಮಾನುಸಾರ ನಿಗದಿಪಡಿಸಿರುವ ಮೊತ್ತದಲ್ಲಿ ಭರಿಸಲು ಸಭೆ ಅನುಮೋದಿಸಿತು

**ಗಾಂಧಿ-150 ಏಕಾಂಕ ನಾಟಕಸ್ಪರ್ಧೆ**

ಗಾಂಧಿ -150 ಏಕಾಂಕ ನಾಟಕ ಸ್ಪರ್ಧೆಯು ಚಿಕ್ಕಮಗಳೂರಿನ 8 ತಾಲ್ಲೂಕಿನಲ್ಲಿ ಮುಗಿದಿದ್ದು, ಪ್ರೌಢಶಾಲಾ ಮಕ್ಕಳಿಗಾಗಿ ಜಿಲ್ಲಾಮಟ್ಟದ ಸ್ಪರ್ಧೆಯು ದಿನಾಂಕ 12-2-2020ರಂದು ಕುವೆಂಪು ಕಲಾಮಂದಿರ, ಚಿಕ್ಕಮಗಳೂರಿನಲ್ಲಿ ನಡೆಯಲಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರಾದ ಸನ್ಮಾನ್ಯ ಶ್ರೀ ಸಿ.ಟಿ.ರವಿಯವರು ನೆರವೇರಿಸಲಿರುವ ವಿಷಯವನ್ನು ಕಾರ್ಯಕ್ರಮದ ಸದಸ್ಯ ಸಂಚಾಲಕರಾದ ಶ್ರೀ ನಾಗರಾಜ್‌ರಾವ್ ಕಲ್ಕಟ್ಟೆ ಅವರು ಸಭೆಯ ಗಮನಕ್ಕೆ ತಂದರು. ಸಹಕಾರ ನೀಡಿದ ಸಾರ್ವಜನಿಕ ಶಿಕ್ಷಣ ಇಲಾಖೆ,ಚಿಕ್ಕಮಗಳೂರು ಇವರಿಗೆ, ಸದಸ್ಯ ಸಂಚಾಲಕರಿಗೆ ಮತ್ತು ಗಾಂಧಿ -150 ಏಕಾಂಕ ಸ್ಪರ್ಧೆಯ ಪರಿಕಲ್ಪನೆ ನೀಡಿದ ಶ್ರೀ ಯಶವಂತ ಸರದೇಶಪಾಂಡೆಯವರುಗಳಿಗೆ ಸ್ಮರಣಿಕೆಯನ್ನು ನೀಡಲು ಸಭೆ ಅನುಮೋದಿಸಿತು.

ಕಾರ್ಯಕ್ರಮದ ಅಂದಾಜು ವೆಚ್ಚ

| ಕ್ರ.ಸಂ | ಕಾರ್ಯಕ್ರಮದ ವಿವರ | ಅಂದಾಜು ಮೊತ್ತ ರೂ. |
|---|---|---|
| 1 | ರಂಗಮಂದಿರದ ಬಾಡಿಗೆ | 8,000/- |
| 2 | ಊಟೋಪಚಾರ | 20,000/- |
| 3 | ಬಹುಮಾನದ ಮೊತ್ತ- ತಾಲ್ಲೂಕುಮಟ್ಟ<br>ಜಿಲ್ಲಾ ಮಟ್ಟ | 8,000/-<br>4,000/-<br>15,000/- |
| 4 | ತೀರ್ಪುಗಾರರ ಗೌರವಧನ, ಪ್ರಯಾಣಭತ್ಯೆ | 5,000/- |
| 5 | ಸ್ಮರಣಿಕೆಗಳು-ಬಹುಮಾನದ ಟ್ರೋಫಿ | 10,000/- |
| 6 | ಸರ್ಟಿಫಿಕೇಟ್‌ಗಳು | 5,000/- |
| 7 | ಪ್ರಚಾರ(ಆಹ್ವಾನಪತ್ರಿಕೆ, ಫ್ಲೆಕ್ಸ್, ಬ್ರೋಚರ್ಸ್ ಇತ್ಯಾದಿ | 10,000/- |
| 8 | ಉದ್ಘಾಟನೆ ಮತ್ತು ಸಮಾರೋಪ ಸಮಾರಂಭದ ಖರ್ಚು | 6,000/- |
| 9 | ಪ್ರಯಾಣವೆಚ್ಚ ಸಂಘಟಕರಿಗೆ | 5,000/- |
| 10 | ಇತರೆ | 4,000/- |
| | ಒಟ್ಟು ರೂ. | 1,00,000/- |

ವಿವರ

| | | |
|---|---|---|
| ಬಹುಮಾನ | ತಾಲ್ಲೂಕುಮಟ್ಟ ಪ್ರಥಮ ತಲಾ 1,000/-ದಂತೆ 8 ತಾಲ್ಲೂಕುಗಳಿಗೆ | 8,000/- |
| | ದ್ವಿತೀಯ ತಲಾ 500/-ರಂತೆ 8 ತಾಲ್ಲೂಕುಗಳಿಗೆ | 4,000/- |
| | ಜಿಲ್ಲಾಮಟ್ಟ ಪ್ರಥಮ-7,000/-<br>ದ್ವಿತೀಯ-5,000/-<br>ತೃತೀಯ-3,000/- | 15,000/- |
| ಪ್ರಶಸ್ತಿ ಪತ್ರಗಳು | ತಾಲ್ಲೂಕುಮಟ್ಟ- ಒಂದು ತಂಡದಲ್ಲಿ<br>12 ಜನ*8=96*3=288 | 5,000/- |
| | ಜಿಲ್ಲಾಮಟ್ಟ 36 ವಿನ್ಯಾಸ ಸೇರಿ | |
| | ------------------------------<br>ಒಟ್ಟು ರೂ.324/- | |

| | | |
|---|---|---|
| ತೀರ್ಪುಗಾರರ ಗೌರವಧನ | 3*1000/- = 3,000/-<br>ಪ್ರಯಾಣಭತ್ಯೆ ಇತ್ಯಾದಿ =2,000/- | 5,000/- |

**ಕತಾರ್ ನಾಟಕೋತ್ಸವ**

ನಾಟಕ ಅಕಾಡೆಮಿಯಿಂದ ಹೊರದೇಶವಾದ ಕತಾರ್ ದೇಶದಲ್ಲಿ ನಾಟಕೋತ್ಸವ ಮಾಡುವ ಪ್ರಸ್ತಾಪವನ್ನು ಕೈ ಬಿಡಲು ಸಭೆ ತೀರ್ಮಾನಿಸಿತು. ಶ್ರೀ ಕೆ.ಬಿ.ಆರ್. ಡ್ರಾಮಾ ಕಂಪನಿ, ದಾವಣಗೆರೆ ಅವರಿಗೆ ಈಗಾಗಲೇ ಶೃಂಗೇರಿಯಲ್ಲಿ ನಡೆಯುವ ವೃತ್ತಿರಂಗಭೂಮಿ ನಾಟಕೋತ್ಸವದಲ್ಲಿ ಅವಕಾಶ ನೀಡಿರುವುದರಿಂದ ಮತ್ತೊಮ್ಮೆ ಅದೇ ತಂಡವನ್ನು ಕತಾರ್‌ಗೆ ಕಳುಹಿಸುವುದು ಬೇಡ ಎಂದೂ ಸಭೆ ತೀರ್ಮಾನಿಸಿತು.

**ನಾಗಪುರ ನಾಟಕೋತ್ಸವ**

ಹೊರರಾಜ್ಯ ನಾಟಕೋತ್ಸವದ ಅಡಿಯಲ್ಲಿ ನಾಗಪುರದಲ್ಲಿ ನಾಟಕೋತ್ಸವ ಮಾಡಲು ಸಭೆಯು ತೀರ್ಮಾನಿಸಿ, ಈಗಾಗಲೇ ನಾಗಪುರ ಕನ್ನಡ ಸಂಘದ ಅಧ್ಯಕ್ಷರಿಗೆ ಪತ್ರ ಬರೆದಿರುವುದನ್ನು ನಾಟಕೋತ್ಸವದ ಸಂಚಾಲಕರಾದ ಶ್ರೀ ಯಶವಂತ ಸರದೇಶಪಾಂಡೆ ಅವರು ಸಭೆಯ ಗಮನಕ್ಕೆ ತಂದರು. ಆ ಸಂಸ್ಥೆಯಿಂದ ಒಪ್ಪಿಗೆ ಪತ್ರ ಬಂದ ನಂತರ ಮಾರ್ಚ್ ತಿಂಗಳ 27, 28 ಮತ್ತು 29ರಂದು ಈ ಕಾರ್ಯಕ್ರಮ ಮಾಡಲು ಮತ್ತು ತಂಡಗಳ ಆಯ್ಕೆ ಮತ್ತು ಅಂದಾಜುವೆಚ್ಚವನ್ನು ಮುಂದಿನ ಸಭೆಯಲ್ಲಿ ಚರ್ಚಿಸಲು ಸಭೆ ತೀರ್ಮಾನಿಸಿತು.

**ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ**

ನಾಟಕ ಅಕಾಡೆಮಿಯಿಂದ ಹುಬ್ಬಳ್ಳಿಯಲ್ಲಿ ವೃತ್ತಿರಂಗಭೂಮಿ ನಾಟಕೋತ್ಸವವಕ್ಕೆ ಕ್ರಿಯಾಯೋಜನೆಯಲ್ಲಿ ಮೀಸಲಿರಿಸಿದ್ದ 6 ಲಕ್ಷದಲ್ಲಿ ಮರುಹೊಂದಾಣಿಕೆ ಮಾಡಿಕೊಂಡು, 5 ಲಕ್ಷದಲ್ಲಿ 3 ನಾಟಕಗಳನ್ನೊಳಗೊಂಡ ವೃತ್ತಿರಂಗಭೂಮಿ ನಾಟಕೋತ್ಸವವನ್ನು ಮತ್ತು ವಿಕಲಚೇತನರ ರಂಗತರಬೇತಿ ಶಿಬಿರವನ್ನು 1ಲಕ್ಷದಲ್ಲಿ ಸದಸ್ಯರಾದ ಶ್ರೀಮತಿ ಪ್ರೇಮಾ ಬಾದಾಮಿ ಅವರ ಸಂಚಾಲಕತ್ವದಲ್ಲಿ ಅವರು ಸೂಚಿಸುವ ಸ್ಥಳದಲ್ಲಿ ನಡೆಸಲು ಸಭೆ ಸಮ್ಮತಿಸಿತು. ಅಂದಾಜುಪಟ್ಟಿ ಮತ್ತು ತಂಡಗಳ ಆಯ್ಕೆ ರೂಪುರೇಷೆ ಬಗ್ಗೆ ಮತ್ತು ಈ ಮರು ಹೊಂದಾಣಿಕೆಗೆ ಅನುಮೋದನೆಯನ್ನು ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಪಡೆಯಲು ತೀರ್ಮಾನಿಸಲಾಯಿತು.

**ಬೆಂಗಳೂರಿನಲ್ಲಿ ವಿಶ್ವರಂಗಭೂಮಿ ದಿನಾಚರಣೆ ಮತ್ತು 29 ಜಿಲ್ಲೆಗಳಲ್ಲಿ ವಿಶ್ವರಂಗಭೂಮಿ ದಿನಾಚರಣೆ**

ಈ ಕಾರ್ಯಕ್ರಮದ ರೂಪುರೇಷೆ ಮತ್ತು ಅಂದಾಜುವೆಚ್ಚವನ್ನು ಮುಂದಿನ ಸಭೆಯಲ್ಲಿ ಚರ್ಚಿಸಲು ಸಭೆ ತೀರ್ಮಾನಿಸಿತು. 2020 ಮಾರ್ಚ್ 27ರಂದು ಕರ್ನಾಟಕ ನಾಟಕ ಅಕಾಡೆಮಿಯಿಂದ ಸದಸ್ಯರು ಸೂಚಿಸುವ ತಂಡಗಳಿಂದ 29 ಜಿಲ್ಲೆಗಳಲ್ಲಿ ರಂಗಗೀತೆ, ವಿಚಾರಸಂಕಿರಣ ಮತ್ತು ನಾಟಕ ಪ್ರದರ್ಶನಗಳನ್ನೊಳಗೊಂಡಂತೆ ಅಕಾಡೆಮಿ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಂಡು ವಿಶ್ವರಂಗಭೂಮಿ ದಿನಾಚರಣೆಯನ್ನು ಆಚರಿಸಲು ಮತ್ತು ಕಾರ್ಯಕ್ರಮ ಮುಗಿದ ನಂತರ ತಂಡಗಳ ಹೆಸರಿಗೆ ರೂ.20,000/-ಗಳ ಸಂಭಾವನೆ ನೀಡಲು ಸಭೆ ಅನುಮೋದಿಸಿತು.

**ಪ್ರಶಸ್ತಿ ಪುಸ್ತಕ ಸೈಟೇಶನ್**

ಸದಸ್ಯರಾದ ಶ್ರೀ ಹೆಚ್.ಎಂ.ನಾಗರಾಜ್‌ರಾವ್ ಅವರು ಸೂಚಿಸಿದ ಕನ್ನಡ ಉಪನ್ಯಾಸಕರಾದ ಡಾ.ಸತ್ಯನಾರಾಯಣ ಅವರಿಂದ ಪ್ರಶಸ್ತಿ ಪುಸ್ತಕದ ಸೈಟೇಶನ್ ಬರವಣಿಗೆ ಸಿದ್ಧಪಡಿಸಲು ಮತ್ತು ಈ ಸಂಬಂಧ ಅವರಿಗೆ ಸಂಭಾವನೆಯಾಗಿ ರೂ.10,000/- ನೀಡಲು ಸಭೆ ಅನುಮತಿಸಿತು.

**ರಂಗಮಂದಿರ ಪ್ರಾಧಿಕಾರದ ಬಗ್ಗೆ**

ಕರ್ನಾಟಕ ನಾಟಕ ಅಕಾಡೆಮಿಯಿಂದ ಕರ್ನಾಟಕ ರಂಗಮಂದಿರ ಪ್ರಾಧಿಕಾರದ ರಚನೆಗೆ ಸಂಬಂಧಿಸಿದಂತೆ, 3ಡಿ ಡಿಸೈನ್ ಮತ್ತು ನೀಲ ನಕ್ಷೆಯನ್ನು ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಜೆ.ಲೋಕೇಶ್

ಅವರ ಅವಧಿಯಲ್ಲಿ ಮಾಡಿಸಿ, ಸಂಬಂಧಿಸಿದವರಿಗೆ ಮೊತ್ತವನ್ನು ಪಾವತಿಸಲಾಗಿತ್ತು. ಸಂಸ್ಕೃತಿ ಸಚಿವರೊಡನೆ ಮಾತನಾಡುವ ಸಂಬಂಧ ಶ್ರೀ ಲೋಕೇಶ್ ಅವರು ತಮ್ಮ ಬಳಿಯೇ ಇಟ್ಟುಕೊಂಡಿದ್ದರು. ಆ ದಾಖಲೆಗಳನ್ನು ಅಕಾಡೆಮಿಗೆ ಹಿಂದಿರುಗಿಸುವಂತೆ ರಿಜಿಸ್ಟ್ರಾರ್ ಅವರು ಲೋಕೇಶ್ ಅವರಿಗೆ ಪತ್ರ ಬರೆದಿದ್ದು, ರಂಗಮಂದಿರ ಪ್ರಾಧಿಕಾರದ ರಚನೆಯ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರಾದ ಸನ್ಮಾನ್ಯ ಶ್ರೀ ಸಿ.ಟಿ.ರವಿ ಅವರೊಡನೆ ಮಾತನಾಡಿ, ಮೂಲ ನಕ್ಷೆ ಮತ್ತು 3 ಡಿ ಡಿಸೈನ್‌ಅನ್ನು ಸಚಿವರಿಗೆ ನೀಡಿರುವುದಾಗಿ ನಿಕಟಪೂರ್ವ ಅಧ್ಯಕ್ಷರು ಮೌಖಿಕವಾಗಿ ತಿಳಿಸಿರುವುದನ್ನು ಸಭೆಯ ಗಮನಕ್ಕೆ ರಿಜಿಸ್ಟ್ರಾರ್ ಅವರು ತಂದರು.

**ವಿಶೇಷಘಟಕ ಯೋಜನೆಯ ರಂಗತರಬೇತಿ ಕಾರ್ಯಾಗಾರ**

ಕರ್ನಾಟಕ ನಾಟಕ ಅಕಾಡೆಮಿಯಿಂದ ದಿನಾಂಕ **2-02-2020** ರಿಂದ **9-02-2020** ರವರೆಗೆ **8** ದಿನಗಳ ಕಾಲ **ವ್ಯವಸಾಯ ಸೇವಾ ಸಹಕಾರಿ ಸಂಘ, ಉಪ್ಪಿನಂಗಡಿಯಲ್ಲಿ** ವಿಶೇಷಘಟಕ ಯೋಜನೆಯಡಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗಾಗಿ ಸದಸ್ಯರಾದ ಶ್ರೀ ಎಂ.ಕೆ.ಮಠ ಅವರ ಸಂಚಾಲಕತ್ವದಲ್ಲಿ ರಂಗತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಈ ಶಿಬಿರದ ನಿರ್ದೇಶಕರಾಗಿ ಶ್ರೀ ಮಹೇಶ್ ರಂಗಾಯಣ ಅವರು ಕೆಲಸ ನಿರ್ವಹಿಸಲು ಒಪ್ಪಿರುವ ಮತ್ತು ಶಿಬಿರಾರ್ಥಿಯಾದ ಶ್ರೀ ಹನುಮಂತರಾಯಪ್ಪ ಅವರು ಕಾರಣಾಂತರದಿಂದ ಶಿಬಿರದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದು, ಅವರ ಬದಲಿಗೆ ದಾವಣಗೆರೆಯಲ್ಲಿ ನಡೆದ ವಿಶೇಷಘಟಕ ಶಿಬಿರಕ್ಕೆ ಆಯ್ಕೆಯಾಗಿ ಗೈರುಹಾಜರಾಗಿದ್ದ ಶ್ರೀ ಲಕ್ಷ್ಮಣ್, ಬೀದರ್ ಅವರನ್ನು ಅಧ್ಯಕ್ಷರ ಅನುಮತಿ ಮೇರೆಗೆ ಕಳುಹಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಶಿಬಿರಕ್ಕೆ ಆಯ್ಕೆಯಾಗಿದ್ದ ಅವಿನಾಶ್, ಮಧುಸೂಧನ್ ಅಲಭ್ಯವಾದ ಕಾರಣ ಅವರ ಬದಲಾಗಿ ದಾಕ್ಷಾಯಿಣಿ ಭಟ್ ಮತ್ತು ವೀರೇಂದ್ರ ಮುತ್ತಿನಮಠ ಇವರನ್ನು ಸಂಪನ್ಮೂಲವ್ಯಕ್ತಿಗಳಾಗಿ ಶಿಬಿರದ ಸಂಚಾಲಕರ ಅನುಮತಿಯೊಂದಿಗೆ ಕಳುಹಿಸಿರುವುದನ್ನು ಸಭೆಯು ಅನುಮೋದಿಸಿತು.

**ಗಿರಿಜನ ಉಪಯೋಜನೆಯ ರಂಗತರಬೇತಿ ಕಾರ್ಯಾಗಾರ**

ನಾಟಕ ಅಕಾಡೆಮಿಯು ಗಿರಿಜನ ಯೋಜನೆಯಡಿ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗಾಗಿ ರಂಗತರಬೇತಿ ಕಾರ್ಯಾಗಾರವನ್ನು ಸದಸ್ಯರಾದ ಶ್ರೀ ಟಿ.ರಾಜಾರಾವ್ ಅವರ ಸಂಚಾಲಕತ್ವದಲ್ಲಿ ದಿನಾಂಕ 20-01-2020 ರಿಂದ 29-01-2020 ರವರೆಗೆ 10 ದಿನಗಳ ಕಾಲ ಅಂಬೇಡ್ಕರ್ ಭವನ, ಹಗರಿಬೊಮ್ಮನಹಳ್ಳಿ, ಬಳ್ಳಾರಿಯಲ್ಲಿ ನಡೆದ ಶಿಬಿರಕ್ಕೆ ಗೈರುಹಾಜರಾಗಿದ್ದ ಸುನೀಲ್ ಅಂತೋಣಿ ಸಿದ್ಧಿ ಅವರ ಬದಲಾಗಿ ಕಾಯ್ದಿರಿಸಿದ್ದ ಪಟ್ಟಿಯಲ್ಲಿ ಇದ್ದ ಹೇಮಂತ್ ಅವರನ್ನು ಶಿಬಿರಕ್ಕೆ ಆಯ್ಕೆ ಮಾಡಿಕೊಂಡಿದ್ದನ್ನು ಸಭೆಯ ಗಮನಕ್ಕೆ ತಂದು ಘಟನೋತ್ತರ ಅನುಮತಿ ಪಡೆಯಲಾಯಿತು. ವಿಶೇಷಘಟಕ ಮತ್ತು ಗಿರಿಜನ ಉಪಯೋಜನೆಯಡಿಯ ರಂಗತರಬೇತಿ ಕಾರ್ಯಾಗಾರದಲ್ಲಿ ಪ್ರದರ್ಶನಗೊಳ್ಳುವ ನಾಟಕಗಳ ರಚನೆಕಾರರಿಗೆ ಗೌರವ ಸಂಭಾವನೆಯನ್ನು ನೀಡುವ ಬಗ್ಗೆ ಚರ್ಚಿಸಲಾಗಿ, ರಚನೆಕಾರರಿಗೆ ರೂ.500/-ಗಳ ಸಂಭಾವನೆ ನೀಡಲು ಸಭೆ ಸಮ್ಮತಿಸಿತು.

**ಮಾಸಾಶನ ಸಂದರ್ಶನ**

ಮಾಸಾಶನ ಸಂದರ್ಶನಕ್ಕೆ ವೈದ್ಯಕೀಯ ಕಾರಣದಿಂದ ಗೈರುಹಾಜರಾಗಿದ್ದ ಮತ್ತು ವಿಕಲಚೇತನರಾದ ಬೆಳಗಾವಿಯ ಕಲಾವಿದರಾದ ಶ್ರೀ ಸಂಗಯ್ಯ ಸಿದ್ದಯ್ಯಾ ಹಿರೇಮಠ ಮತ್ತು ಮಂಡ್ಯ ಕಲಾವಿದರಾದ ಶ್ರೀ ಬೋರಪ್ಪ ಅವರ ಸಂದರ್ಶನ ದಿನ ಅವರ ತಂದೆ ನಿಧನ ಹೊಂದಿದ್ದರಿಂದ ಗೈರುಹಾಜರಾಗಿದ್ದು, ಇವರೀರ್ವರ ಸಂದರ್ಶನಕ್ಕೆ ಹಿಂದಿನ ಸಭೆಯಲ್ಲಿ ಅನುಮತಿ ನೀಡಿದ್ದು, ಅವರ ಸಂದರ್ಶನವನ್ನು ಸದಸ್ಯರಾದ ಶ್ರೀ ವಿನೋದ ಅಂಬೇಕರ್ ಮತ್ತು ಶ್ರೀಮತಿ ಪ್ರೇಮ ಬಾದಾಮಿ ಅವರು ನಡೆಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

**ಅಧ್ಯಕ್ಷರು ಮತ್ತು ರಿಜಿಸ್ಟ್ರಾರ್ ಅವರ ವಾಹನ ಟೆಂಡರ್**

ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಿಗೆ ಸ್ಥಳೀಯ ಓಡಾಟಕ್ಕಾಗಿ ಮತ್ತು ರಿಜಿಸ್ಟ್ರಾರ್‌ರಿಗೆ ಅಕಾಡೆಮಿಯ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಕರೆದಿದ್ದ ವಾಹನಗಳ ಟೆಂಡರ್ ಅವಧಿ ಮಾರ್ಚ್ 2020ಕ್ಕೆ

ಮುಕ್ತಾಯವಾಗುತ್ತಿದ್ದು, 2020 ಏಪ್ರಿಲ್‌ನಿಂದ 2021 ಮಾರ್ಚ್‌ವರೆಗೆ ವಾಹನವನ್ನು ಮಾಸಿಕ ಬಾಡಿಗೆ ಆಧಾರದಲ್ಲಿ ಪಡೆಯಲು ಆಸಕ್ತ ಸಂಸ್ಥೆಗಳಿಂದ ಇ- ಟೆಂಡರ್ ಕರೆಯಲು ಸಭೆ ಅನುಮತಿ ನೀಡಿತು.

**ಜನರಲ್ ಫೆಲೋಶಿಪ್**

2014-15ನೇ ಸಾಲಿನ ಸಂಶೋಧನಾ ಫೆಲೋಶಿಪ್ ಅಭ್ಯರ್ಥಿಯಾದ ಶ್ರೀ ರಾಜು ಮಳವಳ್ಳಿ ಅವರು ಮೊದಲನೇ ಕಂತಿನ ಮೊತ್ತವನ್ನು ಪಡೆದಿದ್ದು, ಅಂತಿಮ ಸಂಶೋಧನಾ ಪ್ರಬಂಧವನ್ನು ಸಲ್ಲಿಸುವಂತೆ ಪತ್ರ ಬರೆಯಲು ಸಭೆ ತಿಳಿಸಿತು.

**ಗುಬ್ಬಿ ವೀರಣ್ಣ ಪ್ರಶಸ್ತಿ ವಿಜೇತರು**

ಇದುವರೆಗೂ ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದಿರುವವರ ಭಾವಚಿತ್ರಗಳನ್ನು ಅಕಾಡೆಮಿಯಲ್ಲಿ ಅಳವಡಿಸಿದ್ದು, ಕಳೆದ ಸಾರಿ ಈ ಪ್ರಶಸ್ತಿ ಪಡೆದ ಶ್ರೀ ಪ್ರಕಾಶ್ ಕಡಪಟ್ಟಿ ಅವರ ಭಾವಚಿತ್ರವನ್ನು ಅಕಾಡೆಮಿಯಲ್ಲಿ ಅಳವಡಿಸಲು ಸಭೆ ಅನುಮತಿಸಿತು.

ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು

* ಮುಂದಿನ ಸರ್ವಸದಸ್ಯರ ಸಭೆಯನ್ನು ದಿನಾಂಕ 18-2-2020ರಂದು ಕರೆಯಲು ಸಭೆ ಅನುಮತಿಸಿತು.

* ಅಧ್ಯಕ್ಷರ ಮಾಸಿಕ ಗೌರವ ಸಂಭಾವನೆ ಹೆಚ್ಚಿಸುವಂತೆ ಸದಸ್ಯರಾದ ಶ್ರೀ ಎಂ.ಎಸ್.ಗುಣಶೀಲನ್ ಅವರು ರಿಜಿಸ್ಟ್ರಾರ್ ಅವರನ್ನು ಕೋರಿದರು. ಅಧ್ಯಕ್ಷರ ಮಾಸಿಕ ಗೌರವ ಸಂಭಾವನೆಯನ್ನು ಸರ್ಕಾರವು ನಿಗದಿಪಡಿಸಿದ್ದು, ಅದನ್ನು ಹೆಚ್ಚು ಮಾಡುವ ಅಧಿಕಾರ ರಿಜಿಸ್ಟ್ರಾರ್ ಅವರಿಗೆ ಇರುವುದಿಲ್ಲ. ಹೆಚ್ಚಳಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೆ, ಆದೇಶ ಬಂದ ನಂತರ ಆದೇಶದಲ್ಲಿರುವಂತೆ ಹೆಚ್ಚಳ ಮಾಡಲಾಗುವುದು ಎಂಬುದನ್ನು ರಿಜಿಸ್ಟ್ರಾರ್ ಅವರು ಸಭೆಯ ಗಮನಕ್ಕೆ ತಂದರು.

* ಸರ್ಕಾರಿ ಕಚೇರಿಗಳಲ್ಲಿ ಮರುಬಳಕೆಯಾಗದ ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆಯನ್ನು ಸರ್ಕಾರ ನಿಷೇಧಿಸಿರುವುದರಿಂದ, ಸ್ಟೀಲ್ ಬಾಟಲ್‌ಗಳನ್ನು ಬಳಸಲು ಸಭೆ ಅನುಮತಿಸಿತು.

* ಗಿರಿಜನ ಉಪಯೋಜನೆಯಡಿ ಫೆಲೋಶಿಪ್ ಪಡೆಯುತ್ತಿರುವ ಶ್ರೀ ಟಿ.ಮಂಜುನಾಥ ಅವರು ಪ್ರಮಾಣಪತ್ರ ನೀಡಲು ಕೋರಿದ್ದು, ಅಕಾಡೆಮಿಯಿಂದ ಫೆಲೋಶಿಪ್ ಪಡೆಯುತ್ತಿರುವ ಎಲ್ಲಾ ಅಭ್ಯರ್ಥಿಗಳಿಗೆ ಒಟ್ಟಿಗೆ ಪ್ರಮಾಣಪತ್ರಗಳನ್ನು ನೀಡುವುದಾಗಿ ರಿಜಿಸ್ಟ್ರಾರ್ ಅವರು ಸಭೆಯ ಗಮನಕ್ಕೆ ತಂದರು. ಅಧ್ಯಕ್ಷರು ಮಂಜುನಾಥ ಅವರಿಗೆ ಲೆಟರ್‌ಹೆಡ್‌ನಲ್ಲಿ ಒಂದು ದೃಢೀಕರಣ ಕಳುಹಿಸಿಕೊಡುವಂತೆ ತಿಳಿಸಿದರು.

* ದಾಖಲೀಕರಣ ಯೋಜನೆಯಡಿಯಲ್ಲಿ ಡಿ.ಟಿ.ಪಿ ಆಪರೇಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀಮತಿ ರಮ್ಯ ಅವರು ಕೆಲಸ ಬಿಟ್ಟಿದ್ದು, ಅವರ ಬದಲಾಗಿ ಶ್ರೀಮತಿ ಶೈಲಜಾ ಅವರನ್ನು ಈ ಕೆಲಸಕ್ಕೆ 2020 ಫೆಬ್ರವರಿ ರಿಂದ ತೆಗೆದುಕೊಂಡಿರುವುದನ್ನು ಸಭೆ ಅನುಮೋದಿಸಿತು.

ಸಭೆಗೆ ಬಂದ ಪತ್ರಗಳು

1. ಆಶಾಕಿರಣ ಕಲಾಟ್ರಸ್ಟ್ (ರಿ),ಗೋಕಾಕ-ಬೆಂಗಳೂರು ಇವರು ಮಾಲತಿಶ್ರೀ ಮೈಸೂರು ಇವರ ಹೆಸರಿನಲ್ಲಿ ದತ್ತಿ ನಿಧಿ ಸ್ಥಾಪಿಸುವ ಸಂಬಂಧ ಮನವಿ ಸಲ್ಲಿಸಿರುತ್ತಾರೆ.
   ಮನವಿಯನ್ನು ಪರಿಶೀಲಿಸಿದ ಸಭೆಯು ಅವರು ನೀಡಿರುವ ಕೆಳಕಂಡ ಷರತ್ತುಗಳಿಗೆ ಒಪ್ಪಿ, ಕನ್ನಡ ವೃತ್ತಿರಂಗಭೂಮಿಯ ಹೆಸರಾಂತ ನಟಿ ಮಾಲತಿಶ್ರೀ,ಮೈಸೂರು ಅವರ ಹೆಸರಿನಲ್ಲಿ "ಮಾಲತಿಶ್ರೀ ಮೈಸೂರು ರಂಗಪ್ರಶಸ್ತಿ" ದತ್ತಿ ಸ್ಥಾಪನೆಗೆ ಐದು ಲಕ್ಷ ರೂಪಾಯಿಗಳನ್ನು ನಾಟಕ ಅಕಾಡೆಮಿಗೆ ನಿಡುಗಂಟಾಗಿ ಸ್ವೀಕರಿಸಲು ಮತ್ತು ಈ ದತ್ತಿ ನಿಧಿ ಪ್ರಶಸ್ತಿಗೆ ಮುಂದಿನ ವರ್ಷ ಚಾಲನೆ ನೀಡಲು ಸಭೆ ಅನುಮತಿಸಿತು.

ಷರತ್ತುಗಳು:

1. ವೃತ್ತಿರಂಗಭೂಮಿಯಾಗಲಿ, ಹವ್ಯಾಸಿ ರಂಗಭೂಮಿಯಾಗಲಿ ಒಟ್ಟಾರೆ ಕನ್ನಡ ರಂಗಭೂಮಿಗೆ ಗಣನೀಯ ಕೊಡುಗೆ ನೀಡಿರುವ ಪ್ರತಿಭಾವಂತ ನಟಿಗೆ ಪ್ರಶಸ್ತಿಯನ್ನು ನೀಡುವುದು
2. ಪ್ರಶಸ್ತಿ ಸ್ವೀಕರಿಸುವ ನಟಿಯ ವಯಸ್ಸು ಅರವತ್ತಕ್ಕಿಂತ ಮೇಲ್ಪಟ್ಟಿರಬೇಕು.

2. ಬಸವರಾಜ ಜೆ ಭಂಟನೂರು, ಯಾದಗಿರಿ ಇವರು ಅಕಾಡೆಮಿ ಕಾರ್ಯಕ್ರಮಗಳಲ್ಲಿ ರಂಗಗೀತೆ ಗಾಯನಕ್ಕೆ ಅವಕಾಶ ನೀಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಇವರಿಗೆ ಮುಂದಿನ ದಿನಗಳಲ್ಲಿ ಅವಕಾಶ ನೀಡಲು ಸಭೆ ಅನುಮತಿಸಿತು.

3. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,ಮಡಿಕೇರಿ ಅಕಾಡೆಮಿ ಆಯೋಜಿಸುವ ರಂಗತರಬೇತಿ ಶಿಬಿರದ ನಿರ್ದೇಶಕರಿಗೆ ಸಂಭಾವನೆ ಭರಿಸುವ ಬಗ್ಗೆ
ಮನವಿಯನ್ನು ಪರಿಶೀಲಿಸಿದ ಸಭೆಯು ಈ ಶಿಬಿರಕ್ಕೆ ಶ್ರೀ ಜೀವನ್ ರಾಂ, ಸುಳ್ಯ ಅವರನ್ನು ಅಕಾಡೆಮಿಯಿಂದ ಶಿಬಿರ ನಿರ್ದೇಶಕರಾಗಿ ಕಳುಹಿಸಲು ಮತ್ತು ಅವರಿಗೆ ಸಂಭಾವನೆಯಾಗಿ ರೂ.25,000/- ನೀಡಲು ಹಾಗೂ ಈ ಮೊತ್ತವನ್ನು ವೃತ್ತಿಕಂಪನಿ ಶಿಷ್ಯವೇತನ ಶೀರ್ಷಿಕೆಯಡಿ ಭರಿಸಲು ಸಭೆ ಅನುಮತಿಸಿತು.

4. ರಂಗಮಂಡಲ,ಬೆಂಗಳೂರು ಇವರು ನಾಟಕೋತ್ಸವಕ್ಕೆ ಸಹಯೋಗಕ್ಕಾಗಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಮುಂದಿನ ದಿನಗಳಲ್ಲಿ ಇವರ ಮನವಿಯನ್ನು ಪರಿಗಣಿಸಲು ಸಭೆ ಅನುಮತಿಸಿತು.

5. ಶ್ರೀ ಶ್ರೀನಿವಾಸ ಕಲಾಮಂದಿರ,ಬೆಂಗಳೂರು ಇವರು ಶ್ರೀ ಪಿ.ವಜ್ರಪ್ಪನವರ ಸ್ಮರಣಾರ್ಥ ಆಚರಿಸುತ್ತಿರುವ 'ರಂಗಸಂಕ್ರಮಣ-2020' ಕಾರ್ಯಕ್ರಮಕ್ಕೆ ಪ್ರಾಯೋಜನೆ /ಧನಸಹಾಯವನ್ನು ಕೋರಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಮುಂದಿನ ದಿನಗಳಲ್ಲಿ ಇವರ ಮನವಿಯನ್ನು ಪರಿಗಣಿಸಲು ಸಭೆ ಅನುಮತಿಸಿತು.

6. ರಂಗಾಯಣ,ಮೈಸೂರು ಇವರು ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ-2020ಕ್ಕೆ ಅಕಾಡೆಮಿಯಿಂದ 2 ನಾಟಕ ತಂಡಗಳನ್ನು ಪ್ರಾಯೋಜಿಸಲು ಕೋರಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ನಾಟಕ ಪ್ರದರ್ಶನ ನೀಡುವ ಒಂದು ನಾಟಕ ತಂಡಕ್ಕೆ ಸಾರಿಗೆ, ಸಂಭಾವನೆ ಸೇರಿದಂತೆ ರೂ.35,000/-ಗಳನ್ನು ಭರಿಸಲು ಸಭೆ ಅನುಮತಿಸಿತು. ಈ ಮೊತ್ತವನ್ನು ವೃತ್ತಿ ಶಿಷ್ಯವೇತನ ಶೀರ್ಷಿಕೆಯಲ್ಲಿ ಭರಿಸಲು ಸರ್ವಸದಸ್ಯರ ಸಭೆ ಅನುಮೋದಿಸಿತು.

7. ಮುಖಾಮುಖಿ ರಂಗಸಂಸ್ಥೆ(ರಿ),ರಾಯಚೂರು ಇವರು ಅಕಾಡೆಮಿಯ ಕಾರ್ಯಕ್ರಮಗಳಲ್ಲಿ ಅವಕಾಶ ನೀಡಲು ಮನವಿ ಕೋರಿರುತ್ತಾರೆ. ಮತ್ತು ರಾಗಸಂಗಮ ಕಲಾಮಂಡಳ(ರಿ)ರಾಯಚೂರು ಇವರು ಮೂರು ದಿನಗಳ ನಾಟಕ ಉತ್ಸವಕ್ಕಾಗಿ ಮನವಿ ಸಲ್ಲಿಸಿರುತ್ತಾರೆ.
ಸದಸ್ಯರಾದ ಶ್ರೀ ಪ್ರಭುದೇವ ಕಪ್ಪಗಲ್ ಅವರೊಂದಿಗೆ ಈ ಬಗ್ಗೆ ಚರ್ಚಿಸಿ, ಅವರು ಸೂಚಿಸುವ ಸಂಸ್ಥೆಗೆ ವಿಶ್ವರಂಗಭೂಮಿ ದಿನಾಚರಣೆ ಕಾರ್ಯಕ್ರಮಕ್ಕೆ ಅವಕಾಶ ನೀಡಲು ಸಭೆ ಸಮ್ಮತಿಸಿತು.

8. ಶ್ರೀ ವಸಂತ ಬನ್ನಾಡಿ,ಉಡುಪಿ ಜಿಲ್ಲೆ ಇವರು 2002ರ ನಾಟಕ ಅಕಾಡೆಮಿ ಪ್ರಶಸ್ತಿ ವಾಪಸ್ಸು ಮಾಡಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಪ್ರಶಸ್ತಿ ಮೊತ್ತವನ್ನು ಅಕಾಡೆಮಿಯ ಬ್ಯಾಂಕ್ ಖಾತೆಗೆ ಜಮಾ ಮಾಡಲು ಅನುಮತಿಸಿತು.

9. ದೃಶ್ಯ,ಬೆಂಗಳೂರು ಇವರು ನಾಟಕ ಪ್ರದರ್ಶನಕ್ಕೆ ಅವಕಾಶ ಕೋರಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ದೃಶ್ಯ ತಂಡದ ಹೊಸ ಪ್ರಯೋಗವಾದ "ವಿದಿಶೆಯ ವಿದೂಷಕ" ನಾಟಕವನ್ನು ಮುಂಬೈ ಕಲಾಕೇಂದ್ರದಲ್ಲಿ ಪ್ರದರ್ಶಿಸಲು ಅನುಮತಿಸಿತು ಮತ್ತು ಸಾರಿಗೆ, ಸಂಭಾವನೆ ಸೇರಿದಂತೆ ಅವರಿಗೆ ರೂ.35,000/- ನೀಡಲು ಸಭೆ ಅನುಮತಿಸಿತು. ಈ ಮೊತ್ತವನ್ನು ವೃತ್ತಿ ಶಿಷ್ಯವೇತನ ಶೀರ್ಷಿಕೆಯಲ್ಲಿ ಭರಿಸಲು ಸರ್ವಸದಸ್ಯರ ಸಭೆ ಅನುಮೋದಿಸಿತು.

10. ಸಾಫಲ್ಯ ರಂಗತಂಡ,ಬೆಂಗಳೂರು ಇವರು ನಾಟಕ ಅಕಾಡೆಮಿ ಉತ್ಸವದಲ್ಲಿ ನಾಟಕ ಪ್ರದರ್ಶನಕ್ಕೆ ಅವಕಾಶಕ್ಕಾಗಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಇವರಿಗೆ ಮುಂದಿನ ದಿನಗಳಲ್ಲಿ ಅವಕಾಶ ನೀಡಲು ಸಭೆ ಅನುಮತಿಸಿತು.

11. ವೀಣಾ –ವಾಣಿ ಗ್ರಾಮೀಣ ಜಾನಪದ ದಲಿತ ಮಹಿಳಾ ಸಾಂಸ್ಕೃತಿಕ ಕಲಾಸಂಸ್ಥೆ(ರಿ)ಕುಳಲಿ, ಮುಧೋಳ, ಬಾಗಲಕೋಟೆ ಇವರು ಕುಳಲಿ ಗ್ರಾಮದಲ್ಲಿ ನಾಟಕೋತ್ಸವ 2 ಕಲಾತಂಡಕ್ಕೆ ಪ್ರಾಯೋಜನೆ ನೀಡಲು ಮನವಿ ಕೋರಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಇವರಿಗೆ ಮುಂದಿನ ದಿನಗಳಲ್ಲಿ ಅವಕಾಶ ನೀಡಲು ಸಭೆ ಅನುಮತಿಸಿತು.

12. ಅಕಾಡೆಮಿಗಳಿಂದ ಬಸ್ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ಪುಸ್ತಕ ಮಳಿಗೆಗಳನ್ನು ತೆರೆಯುವ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಂದ ಪತ್ರ ಬಂದಿರುತ್ತದೆ.
ಇಲಾಖೆಯು ಪುಸ್ತಕ ಮಳಿಗೆಗಳನ್ನು ತೆರೆದಲ್ಲಿ ಅಕಾಡೆಮಿಯ ಪ್ರಕಟಣೆಗಳನ್ನು ಮಾರಾಟಕ್ಕೆ ನೀಡಲು ಸಭೆ ಅನುಮೋದಿಸಿತು.

13. ಅಕ್ಕಮಹಾದೇವಿ ಕಲಾ, ಸಾಹಿತ್ಯ, ಮತ್ತು ಸಾಂಸ್ಕೃತಿಕ ಸಂಘ, ಸಂಕೇಶ್ವರ ಆದರ್ಶನಗರ ಅಂಚೆ, ಬೆಳಗಾವಿ ಇವರು ವಿಚಾರ ಸಂಕಿರಣ ಹಾಗೂ ನಾಟಕ ಪ್ರದರ್ಶನಕ್ಕೆ ಧನಸಹಾಯ ನೀಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಇವರಿಗೆ ಮುಂದಿನ ದಿನಗಳಲ್ಲಿ ಅವಕಾಶ ನೀಡಲು ಸಭೆ ಅನುಮತಿಸಿತು.

14. ಕನ್ನಡ ಕಲಾಕೇಂದ್ರ, ಮುಂಬಯಿ ಇವರು ನಾಟಕ ಪ್ರದರ್ಶನಕ್ಕೆ ಅವಕಾಶ ಕೋರಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಬೆಂಗಳೂರಿನ ದೃಶ್ಯ ತಂಡದ ನಾಟಕ 'ವೇದಿಕೆಯ ವಿದೂಷಕ' ನಾಟಕವನ್ನು ಕನ್ನಡ ಕಲಾಕೇಂದ್ರ, ಮುಂಬಯಿ ಇಲ್ಲಿಗೆ ಅಕಾಡೆಮಿ ಸಹಯೋಗ ನೀಡಲು ಮತ್ತು ನಾಟಕ ಪ್ರದರ್ಶಿಸುವ ಸಂಬಂಧ ಕಳುಹಿಸಲು ಸಭೆ ಸಮ್ಮತಿಸಿತು.

15. ಮುಖ್ಯಮಂತ್ರಿಯವರ ಸಲಹೆಗಾರರಾದ ಶ್ರೀ ಬೇಳೂರು ಸುದರ್ಶನ ಅವರು 28-12-2019ರಂದು ನಡೆದ ಅಕಾಡೆಮಿಯ ಒಂದು ದಿನದ ಕಾರ್ಯಾಗಾರದಲ್ಲಿ ಮಂಡಿಸಿದ ಸಲಹೆಗಳನ್ನು ಲಿಖಿತ ರೂಪದಲ್ಲಿ ನೀಡಿರುವುದನ್ನು ತಿಳಿಸಲಾಯಿತು.

16. ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶಿವಮೊಗ್ಗ ಇವರು ಮಹಾತ್ಮಗಾಂಧೀಜಿಯವರ 150ನೇ ಜನ್ಮ ದಿನೋತ್ಸವ ವರ್ಷದ ಆಚರಣೆಯ ಪ್ರಯುಕ್ತ ರಾಜ್ಯಮಟ್ಟದ ನಾಟಕೋತ್ಸವ ನಡೆಸುವ ಪ್ರಯುಕ್ತ ಧನಸಹಾಯ ಕೋರಿರುತ್ತಾರೆ.
ಈಗಾಗಲೇ ಈ ಕಾರ್ಯಕ್ರಮವನ್ನು ಚಿಕ್ಕಮಗಳೂರಿನಲ್ಲಿ ಅಕಾಡೆಮಿಯಿಂದ ಹಮ್ಮಿಕೊಂಡಿರುವುದರಿಂದ ಈ ಮನವಿಯನ್ನು ಪರಿಗಣಿಸದಿರಲು ಸಭೆ ಸಮ್ಮತಿಸಿತು.

17. ಗೌತಮ ಬುದ್ಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ(ರಿ)ಚಿಕ್ಕಬಳ್ಳಾಪುರ ಜಿಲ್ಲೆ ಇವರು ವಿಶ್ವರಂಗಭೂಮಿ ದಿನಾಚರಣೆ ಕಾರ್ಯಕ್ರಮಕ್ಕೆ ಅವಕಾಶ ಕೋರಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಮುಂದಿನ ದಿನಗಳಲ್ಲಿ ಅವಕಾಶ ನೀಡಲು ಸಭೆ ಅನುಮತಿಸಿತು.

18. ನಮ ತುಳುವರ್ ಕಲಾ ಸಂಘಟನೆ(ರಿ)ಮುದ್ರಾಡಿ ಇವರು ಮುದ್ರಾಡಿ ಅಂತರಾಷ್ಟ್ರೀಯ ರಂಗೋತ್ಸವ-10ರಲ್ಲಿ ಎರಡು ದಿನದ ಕಾರ್ಯಕ್ರಮ ನೀಡುವ ಬಗ್ಗೆ ಮನವಿ ಸಲ್ಲಿಸಿರುತ್ತಾರೆ.
ಅಕಾಡೆಮಿಯ ಸಹಯೋಗದಲ್ಲ ಕಾರ್ಯಕ್ರಮ ನಡೆಸಲು ಒಂದು ತಂಡಕ್ಕೆ ರೂ.35,000/- ನೀಡಲು ಮತ್ತು ತಂಡ & ನಾಟಕದ ಆಯ್ಕೆಯನ್ನು ಮುಂದಿನ ಸಭೆಯಲ್ಲಿ ಅಂತಿಮಗೊಳಿಸಲು ನಿರ್ಧರಿಸಲಾಯಿತು. ಈ ಮೊತ್ತವನ್ನು ವೃತ್ತಿ ಶಿಷ್ಯವೇತನ ಶೀರ್ಷಿಕೆಯಲ್ಲಿ ಭರಿಸಲು ಸರ್ವಸದಸ್ಯರ ಸಭೆ ಅನುಮೋದಿಸಿತು.

19. ರಂಗವರ್ಷ ಸಾಂಸ್ಕೃತಿಕ ಟ್ರಸ್ಟ್(ರಿ)ಕೆ.ಜಿ.ಎಫ್ ಇವರು ರಂಗವರ್ಷಕ್ಕೆ 46ರ ವಾರ್ಷಿಕೋತ್ಸವ ಕಾರ್ಯಕ್ರಮದ ಬಗ್ಗೆ ಪತ್ರ ನೀಡಿರುತ್ತಾರೆ.
ಶ್ರೀ ಟಿ.ಆರ್.ಮಲ್ಲಿಕಾರ್ಜುನಯ್ಯ ಅವರನ್ನು ಶಿಬಿರ ನಿರ್ದೇಶಕರನ್ನಾಗಿ ಕಳುಹಿಸಲು ಮತ್ತು ಅವರಿಗೆ ನಿರ್ದೇಶಕರ ಸಂಭಾವನೆ ರೂ.30,000/- ನೀಡಲು ಸಭೆ ಅನುಮತಿಸಿತು. ಈ ಮೊತ್ತವನ್ನು ವೃತ್ತಿ ಶಿಷ್ಯವೇತನ ಶೀರ್ಷಿಕೆಯಲ್ಲಿ ಭರಿಸಲು ಸರ್ವಸದಸ್ಯರ ಸಭೆ ಅನುಮೋದಿಸಿತು.

ರಿಜಿಸ್ಟ್ರಾರ್ ವಂದನೆ ಸಲ್ಲಿಸುವುದರ ಮೂಲಕ ಸಭೆ ಮುಕ್ತಾಯವಾಯಿತು

( ಪ್ರೊ.ಭೀಮಸೇನ.ಆರ್)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

(ಡಾ.ಶೈಲಜಾ ಎ.ಸಿ) 17/2/2020
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ